**<u>ಪಾಟೀಸವಾಲುಃವಾದಿಗಳ ಪರ ಶ್ರೀ ಎಲ್ ಎಮ್ ವಕೀಲರಿಂದಃ</u>**

1. ಕಲ್ಲಿರಪ್ಪ ದಿಂದ ದೊಡ್ಡಸಿದ್ದವ್ವನಹಳ್ಳಿಗೆ 8 ಕಿಮೀ ಅಂತರ. ದೊಡ್ಡಸಿದ್ದವ್ವನಹಳ್ಳಿ ಯಲ್ಲಿರುವ ಕರ್ನಾಟಕ ಬ್ಯಾಂಕ ನೋಡಿದ್ದೇನೆ. ಸದರಿ ಬ್ಯಾಂಕ್ ನಲ್ಲಿ ನನಗೆ ಸಂಬಂದಿಸಿದ ಖಾತೆ ಇದೆ. 2013 ರಲ್ಲಿ ನನ್ನ ತಂದೆ ದ್ಯಾಮಪ್ಪ ಮರಣಹೊಂದಿರುತ್ತಾರೆ. ನನ್ನ ತಂದೆಗೆ ಒಬ್ಬನೇ ಮಗ ನಾನು , 3 ಜನ ಹೆಣ್ಣು ಮಕ್ಕಳು ಇದ್ದು ಅವರುಗಳೆಂದರೆ ದ್ಯಾಮಕ್ಕ , ಬಾಗ್ಯಮ್ಮ, ಶೈಲಜ. ಸದರಿ ಮೂರು ಜನ ಹೆಣ್ಣುಮಕ್ಕಳು ಜೀವಂತ ಇದ್ದಾರೆ. ಸದರಿ ಮೂರು ಜನ ಮದುವೆಯಾಗಿದ್ದು ಗಂಡಂದಿರ ಮನೆಯಲ್ಲಿ ವಾಸ. ದ್ಯಾಮಕ್ಕ ನಂದನಹೊಸೂರು ಹೊಳಲ್ಕೆರೆ ತಾಲ್ಲೂಕಿನಲ್ಲಿ ವಾಸ. ಬಾಗ್ಯಮ್ಮ ಕಳ್ಳೀರಪ್ಪ ನಮ್ಮ ಊರಿನಲ್ಲಿ ವಾಸ . ಶೈಲಜ ಹಿರಿಯೂರು ತಾಲ್ಲೂಕು ಸಲ ಬೊಮ್ಮನಹಳ್ಳಿ ಯಲ್ಲಿ ವಾಸ.

2. ಈ ದಾವೆ ದಾಖಲು ಮಾಡಿರುವ ಬಗ್ಗೆ ನನ್ನ ಮೂರು ಜನ ಸಹೋದರಿಯರಿಗೆ ಗೊತ್ತು. ಸಾಲ ತೆಗೆದುಕೊಂಡ ಬಗ್ಗೆ ನಮಗೆ ಗೊತ್ತಿಲ್ಲ ಸಾಲ ನಮ್ಮಪ್ಪ ತೆಗೆದುಕೊಂಡಿರುವುದು ಎಂದು ತಿಳಿಸಿರುತ್ತಾರೆ. ನನ್ನ ತಂದೆ ಜೀವಿತಾ ಕಾಲದಲ್ಲಿ ಬ್ಯಾಂಕ್ ಏನು ವ್ಯವಹಾರ ಮಾಡಿದ್ದರು ಅವರ ಖಾತೆ ಬ್ಯಾಂಕ್ ನಲ್ಲಿ ಇತ್ತ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ .

ಪುನಃ ಸಾಕ್ಷಿಗೆ ನಿಮ್ಮ ತಂದೆ ಮಾಡಿದ ವ್ಯವಹಾರದ ಬಗ್ಗೆ ನಿಮಗೆ ಗೊತ್ತಿಲ್ಲವಾ ಎಂದರೆ ತಕ್ಷಣ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎಸ್ ರವರು ಸಾಕ್ಷಿ ಈಗಾಗಲೇ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ಮತ್ತೆ ಏಕೆ ಪ್ರಶ್ನೆ ಕೇಳುತ್ತೀರಾ ಎಂದು ವಾದಿ ಪರ ವಕೀಲರಿಗೆ ಏರು ದ್ವನಿ ಯಲ್ಲಿ ಪ್ರಶ್ನಿಸಿದ್ದು ವಕೀಲರ ವರ್ತನೆ ತೆರೆದ ನ್ಯಾಯಾಲಯದಲ್ಲಿ ಅಸಂಮಂಜಸ ಕಾರಣ ಸಾಕ್ಷಿಗೆ ಪ್ರಶ್ನೆ ಅರ್ಥವಾಗದಿದ್ದಲ್ಲಿ ನ್ಯಾಯಾಲಯ ವಿವರಿಸಿ

ಉತ್ತರ ತೆಗೆದುಕೊಳ್ಳುವ ಜವಾಬ್ದಾರಿ ಹೊತ್ತಿದ್ದು ವಕೀಲರು ವಕೀಲರನ್ನು ಪ್ರಶ್ನಿಸುವ ವೃತ್ತಿ ವಕೀಲರ ವೃತ್ತಿ ಅಲ್ಲ ಎಂದು ತಿಳಿಸಿ ಮರುಕಳಿಸದಂತೆ ಮಾನ್ಯ ವಕೀಲರಿಗೆ ತಿಳಿಹೇಳಿದೆ.

3. ನಾನು ವ್ಯವಸಾಯಗಾರ. ಹತ್ತಿ , ಸೂರ್ಯಕಾಂತಿ ಬೆಳೆ ಬೆಳೆಯುತ್ತೇವೆ. ಸದರಿ ಹತ್ತಿ , ಸೂರ್ಯಕಾಂತಿ ಬೆಳೆ ಮಾರಾಟ ಮಾಡಿ ಬಂದ ಹಣದಲ್ಲಿ ಖರ್ಚಿಗಾಗಿ ಅವಶ್ಯಕತೆ ಇರುವಷ್ಟು ಮಾತ್ರ ಇಟ್ಟುಕೊಂಡು ಹೆಚ್ಚಿನ ಹಣ ಬ್ಯಾಂಕ್ ನಲ್ಲಿ ಇಡುತ್ತೇನೆ ಎಂದರೆ ಸಾಕ್ಷಿ ಹೇಳಬೇಕೆಂದರೆ ನಾನು ಚಿತ್ರದುರ್ಗದಲ್ಲಿ ಇಲ್ಲವೇ ಇಲ್ಲ ನಾನು ಬೆಂಗಳೂರಿನಲ್ಲಿ ವಾಸ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಮಕ್ಕಳು ಮಕ್ಕಳ ವಿದ್ಯಾಬ್ಯಾಸ ಕಾರಣದಿಂದ ಬೆಂಗಳೂರಿನಲ್ಲಿ ವಾಸ. ಸುಮಾರು 30 ವರ್ಷಗಳಿಂದ ನಾನು ಬೆಂಗಳೂರಿನಲ್ಲಿ ವಾಸ. ಹಬ್ಬ ಹರಿದಿನಗಳಲ್ಲಿ ನನ್ನ ತಂದೆ ತಾಯಿ ಜೀವಿತ ಕಾಲದಲ್ಲಿ ನಾನು ಕಲ್ಲಿರಪ್ಪ ಗ್ರಾಮಕ್ಕೆ ಬರುತಿದ್ದೆ ಉಳಿದಂತೆ ನನ ತಂದೆ ತಾಯಿಯೇ ಅವಶ್ಯಕತೆ ಇದ್ದಲ್ಲಿ ಬೆಂಗಳೂರಿಗೆ ಬರುತಿದ್ದರು.

4. ವ್ಯವಸಾಯ , ವ್ಯವಸಾಯಕ್ಕೆ ತಗಲುವ ಖರ್ಚು ವೆಚ್ಚ , ವ್ಯವಸಾಯಕ್ಕೆ ಬೇಕಾದ ಅಗತ್ಯಗಳನ್ನು ನನ್ನ ತಂದೆಯೇ ನಿರ್ವಹಿಸುತಿದ್ದರು. ವ್ಯವಸಾಯಕ್ಕೆ ಸಂಬಂದಿಸಿದಂತೆ ಬೀಜ ಗೊಬ್ಬರ ಬೇಕಾದಲ್ಲಿ ನನ್ನಿಂದ ಹಣ ಪಡೆದುಕೊಂಡು ಹೋಗುತಿದ್ದರು. ನನ್ನ ತಂದೆಗೆ ಬೇಸಾಯಕ್ಕಾಗಿ ಎಷ್ಟು ಹಣ ಯಾವಾಗ ಯಾವ ಯಾವ ದಿನ ನೀಡಿದ್ದೆ ಲೆಕ್ಕ ಇಟ್ಟಿಲ್ಲ. ನಾನು ಬೆಂಗಳೂರಿನಲ್ಲಿ ಜೀವನೋಪಯಕ್ಕಾಗಿ ಕೆಲಸ ಮಾಡುತಿದೇನೆ . ಸದರಿ ಕೆಲಸ ಕಾಂಟ್ರಾಕ್ಟ ಬೇಸಿಸ್ ಮೇಲೆ ಮಾಡುತಿದ್ದೇನೆ. ನನ್ನ ಹೆಂಡತಿ ಖಾಸಗಿ ಶಿಕ್ಷಕಿ ಆಕೆಯ ದುಡಿಮೆ ನನ್ನ ದುಡಿಮೆ ಮಕ್ಕಳ ವಿದ್ಯಾಬ್ಯಾಸ ಮನೆ ನಿರ್ವಹಣೆಗೆ ಸಾಕಾಗುತ್ತದೆ. ನನ್ನ ಆದಾಯ ಮತ್ತು ನನ್ನ ಹೆಂಡತಿ ಆದಾಯದಿಂದ ಹೆಚ್ಚುಕಡಿಮೆ ಮನೆಯ ಖರ್ಚು ವೆಚ್ಚ ತೂಗಿಸಿಕೊಂಡು ಹೋಗುತ್ತೇವೆ. ದಿಃ14.08.2008 ರಂದು ನನ್ನ ತಂದೆ ಬೆಳೆ ಸಾಲವಾಗಿ 45 ಸಾವಿರ ರೂ ವಾದಿ

ಬ್ಯಾಂಕ್ ನಿಂದ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ತಲೆ ಅಲ್ಲಾಡಿಸುತ್ತಾರೆ.

5. ಕಾಲ ಕಾಲಕ್ಕೆ ಮಳೆ ಬೆಳೆ ಆಗದ ಸಂಬಂದ ಸದರಿ ನನ್ನ ತಂದೆ ಪಡೆದ ಸಾಲ ಹಂತ ಹಂತವಾಗಿ ಮರುಪಾವತಿಸದೇ ಇದ್ದು ಆ ಸಂಬಂದ ಬ್ಯಾಂಕ್ ಗೆ ಸಾಲ ತೀರುವಳಿಗೆ ಸಂಬಂದಿಸಿದಂತೆ ಪುನರುಜ್ಜೀವನ ದಾಖಲೆ ಸಹ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಾಖಲೆ ತೋರಿಸಲಾಗಿ ಸಾಕ್ಷಿ ಸಹಿ ನನ್ನದೇ ಎಂದು ಗುರುತಿಸಿದು ನಿಪಿ.3 ರಿಂದ 6 ರವರಿಗಿನ ಸಹಿಗಳನ್ನು ನಿಪಿ.3(ಎ) ರಿಂದ 6(ಎ) ಎಂದು ಗುರುತಿಸಲಾಯಿತು. ನಿಪಿ.3 ರಿಂದ 6 ದಾಖಲೆಗಳನ್ನು ನನ್ನ ತಂದೆ ಪಡೆದ ಸಾಲಕ್ಕಾಗಿ ನನ್ನ 2013 ರಲ್ಲಿ ಮರಣಹೊಂದಿದ್ದು ಕಾರಣ ನಾನೇ ಬ್ಯಾಂಕ್ ಗೆ ಸದರಿ ದಾಖಲೆಗಳನ್ನು ಸಾಲ ಮರುಪಾವತಿಗಾಗಿ ಒಪ್ಪಿ ಮಾಡಿಕೊಟ್ಟಿದ್ದು ಎಂದರೆ ಸರಿ.

6. ಸಾಕ್ಷಿ ಮುಂದುವರೆದ ಬ್ಯಾಂಕ್ ನ ತಗಾದೆ ನೋಟೀಸ ಬೆಂಗಳೂರಿನ ವಿಳಾಸಕ್ಕೆ ಜಾರಿಯಾಗಿದ್ದು ನನ್ನ ತಂದೆ ಮಾಡಿರುವ ಸಾಲದ ಬಗ್ಗೆ ಬ್ಯಾಂಕ್ ನವರು ಕರಸಿದ್ದರು ನನ್ನ ತಂದೆ ಮಾಡಿದ ಸಾಲದ ಬಗ್ಗೆ ನನಗೆ ಮಾಹಿತಿ ನೀಡಿ ಸದರಿ ಹಣ ಮರುಪಾವತಿಸುವಂತೆ ಕೇಳಿದ್ದರು ನನ್ನ ಖಾತೆಗೆ ಸಂಬಂದಿಸಿದಂತೆ 50 ಸಾವಿರ ಸಾಲ , ಬಡ್ಡಿ 5 ಸಾವಿರ ಆದರೆ ಸಾಲ 45 ಸಾವಿರ ಮಾತ್ರ ಪಡೆದಿದ್ದು ಅಸಲು ಬಡ್ಡಿ ಸೇರಿ 50 ಸಾವಿರದಂತೆ ನೀಡಿದ್ದು ಸದರಿ ಸಾಲ ತೀರುವಳಿ ಮಾಡಿ ನನ್ನ ತಂದೆಗೆ ಸಂಬಂದಿಸಿದ ಖಾತೆ ಸಹ ಮುಕ್ತಾಯ ಗೊಳಿಸಿ ನನ್ನ ಖಾತೆಗೆ ಸಂಬಂದಿಸಿದ ಸಾಲ ಮುಂದುವರೆಸಿದ್ದೆ ಎಂದು ಸ್ವತಃ ನುಡಿಯುತ್ತಾರೆ.

7. ನನ್ನ ತಂದೆ ಸಾಲದ ಖಾತೆ ತೀರುವಳಿ ಆಗಿದೆ ಎಂಬ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ. ಸಾಲ ತೀರುವಳಿ ಆದ ನಂತರ ದಾಖಲೆ ನೀಡುವಂತೆ ನಾನು ವಾದಿ ಬ್ಯಾಂಕ್ ನ್ನು ಕೇಳಲಿಲ್ಲ ಕಾರಣ ನನಗೆ ಆ ಬಗ್ಗೆ ಗೊತ್ತಿರಲಿಲ್ಲ. ನನ್ನ ತಂದೆಯ ಸಾಲದ

ಸಂಪೂರ್ಣ ಹಣ ನಾನು ಪಾವತಿಸಿದ್ದು ರಶೀದಿಗಳನ್ನು ನನ್ನ ಬಳಿ ನೀಡಿಲ್ಲ ಬದಲಿಗೆ ಬ್ಯಾಂಕ್ ನವರ ಬಳಿ ಇದೆ ಆದರೆ ಪಾಸ್ ಪುಸ್ತಕದಲ್ಲಿ ಕಾಣಿಸಿದೆ ಸದರಿ ನನ್ನ ತಂದೆಯ ಸಾಲದ ಮುಕ್ತಾಯಗೊಂಡ ಖಾತೆಗೆ ಸಂಬಂದಿಸಿದ ಪಾಸ್ ಪುಸ್ತಕ ನನ್ನ ಬಳಿ ಇದೆ. ಅಸಲು ಬಡ್ಡಿ ಎರಡೂ ಸೇರಿ ನನ್ನ ತಂದೆಯ ಖಾತೆ ಸಾಲ ತೀರುವಳಿ ಮಾಡಿದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

8. ರೂ.45,230/- ಸಾಲ ಬಾದ್ಯತೆಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾನಂತರ ನನ್ನ ತಂದೆಗೆ ಸಂಬಂದಿಸಿದ ಜಮೀನಿನ ಸ್ವಾದೀನದಾರನಾಗಿ ನಾನೇ ಅನುಬವಿಸುತಿದ್ದೇನೆ ಎಂದರೆ ಸರಿ. ನನ್ನ ತಂದೆ ಸಾಲ ಮರುಪಾವತಿ ಮಾಡಲು ನಾನು ಬಾದ್ಯಸ್ತ ಬಾದ್ಯತೆ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಪ್ರಮಾಣಪತ್ರ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**